**<u>ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 16-04-2026:</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ</u>**

25.ಆರ್ ಟಿ ಒ ಕಛೇರಿಯಿಂದ ದ್ವಿಚಕ್ರ ವಾಹನ ಕೆಎ-20-ಎಲ್3612 ಕ್ಕೆ ಸಂಬಂಧಿಸಿದಂತೆ ನೀಡಿದ ಮಾಹಿತಿಯನ್ನು **ನಿಪಿ-187**ರ ಪತ್ರದೊಂದಿಗೆ ದಿನಾಂಕ 16-7-14 ರಂದು ಸ್ವೀಕರಿಸಿರುತ್ತೇನೆ. ಸ್ವೀಕರಿಸಿದ ಬಗ್ಗೆ ರುಜು ಇದ್ದು ನಿಪಿ-187(ಎ) ಎಂದು ಗುರುತಿಸಲಾಯಿತು.

26.ದಿನಾಂಕ 27-11-13 ರಂದು national insurance company ಯವರು ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರಿಗೆ ವಾಹನ ಸಂಖ್ಯೆ ಕೆಎ-13-ಎಂ-2780ಕ್ಕೆ ಸಂಬಂಧಿಸಿದಂತೆ ನೀಡಿದ **ನಿಪಿ-188**ರ ಮಾಹಿತಿಯನ್ನು ಸದರಿಯವರು ದಿನಾಂಕ 5-12-13 ರಂದು ಸ್ವೀಕರಿಸಿರುತ್ತಾರೆ.

27.ದಿನಾಂಕ 6-4-15 ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಹಾಸನ ಇವರು ಕೆಎ-13-3278ರ ಮಹೀಂದ್ರ ಮ್ಯಾಕ್ಸಿಕ್ಯಾಬ್ ವಾಹನದ ಮಾಹಿತಿ ನೀಡುವಂತೆ **ನಿಪಿ-189**ರಂತೆ ಪತ್ರ ಬರೆದಿರುತ್ತೇನೆ. ಅದೇ ದಿವಸ ಸದರಿಯವರು ಸದರಿ ವಾಹನದ ಬಿ ಎಕ್ಸ್ಟ್ರಾಕ್ಟನ್ನು **ನಿಪಿ-190**ರಂತೆ ನೀಡಿರುತ್ತಾರೆ.

28.ದಿನಾಂಕ 23-11-13ರಂದು ಆರೋಪಿತರ ಹೆಸರಿನಲ್ಲಿದ್ದಂತಹ ಕುವೆಂಪುನಗರದಲ್ಲಿದ್ದ 1ನೇ ಹಂತದಲ್ಲಿರುವ ಎಲ್ ಐ ಜಿ 214 ರ ವಾಸದ ಮನೆಯ ಮತ್ತು ಅವರ ಹೆಂಡತಿ ಪದ್ಮಾವತಿರವರ ಹೆಸರಿನಲ್ಲಿರುವ ಕೆ ಹಚ್ ಬಿ ಕಾಲೋನಿಯಲ್ಲಿರುವ ಎಂ ಐ ಜಿ 1442ಕ್ಕೆ ಸಂಬಂಧಿಸಿದ ಮೌಲ್ಯಮಾಪನ ವರದಿಯನ್ನು ಚಾಸಾ-54 ರವರು **ನಿಪಿ-191**ರ ಪತ್ರದೊಂದಿಗೆ ಸ್ವೀಕರಿಸಿರುತ್ತಾರೆ. ಆ ಮೌಲ್ಯಮಾಪನ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-65 ಎಂದು ಗುರುತಿಸಲಾಗಿರುತ್ತದೆ. ಅದರಂತೆ ಆರೋಪಿತರ ಹೆಂಡತಿಯ ಕಟ್ಟಡದ ಮೌಲ್ಯಮಾಪನ 46,04,709ರೂಪಾಯಿ ಆಗಿರುತ್ತದೆ.

29.ದಿನಾಂಕ 25-11-13 ರಂದು ವ್ಯವಸ್ಥಾಪಕರು ಯು ಟಿ ಐ ಬ್ಯಾಂಕ್ ಹಾಸನ ಇವರಿಗೆ ಆರೋಪಿತರ ಪತ್ನಿ ಪದ್ಮಾವತಿರವರ ಬಾಪ್ತು ಖಾತೆ ಸಂಖ್ಯೆ 203010100050768ಕ್ಕೆ ಸಂಬಂಧಪಟ್ಟಂತೆ ಮಾಹಿತಿ ಕೋರಿ ಚಾಸಾ-54 ರವರು ನಿಪಿ-87ರಂತೆ ಪತ್ರ ಬರೆದಿರುತ್ತಾರೆ. ಸದರಿ ಬ್ಯಾಂಕ್ ಆಕ್ಸಿಸ್ ಬ್ಯಾಂಕ್ ಆಗಿರುತ್ತದೆ. ಆಕ್ಸಿಸ್ ಬ್ಯಾಂಕ್ ನವರು ದಿನಾಂಕ 26-11-13 ರಂದು ನಿಪಿ-88 ಮತ್ತು 89ರಂತೆ ಮಾಹಿತಿ ನೀಡಿದನ್ನು ಸದರಿಯವರು ಸ್ವೀಕರಿಸಿರುತ್ತಾರೆ.

30.ದಿನಾಂಕ 25-11-13 ರಂದು ವ್ಯವಸ್ಥಾಪಕರು ಕಾರ್ಪೊರೇಷನ್ ಬ್ಯಾಂಕ್ ಹಾಸನ ಇವರಿಗೆ ಆರೋಪಿತರ ಮಗ ಸುದರ್ಶನ್ ರವರ ಬಾಪ್ತು ಖಾತೆ ಸಂಖ್ಯೆ43906ಕ್ಕೆ ಸಂಬಂಧಪಟ್ಟಂತೆ ಮಾಹಿತಿ ಕೋರಿ ಚಾಸಾ-54 ರವರು ನಿಪಿ-71ರಂತೆ ಪತ್ರ ಬರೆದಿರುತ್ತಾರೆ. ನಂತರ 28-11-13 ರಂದು ಸದರಿಯವರು ನಿಪಿ-72 ರಿಂದ 74ರಂತೆ ಮಾಹಿತಿ ನೀಡಿದ್ದನ್ನು ಸದರಿಯವರು ಸ್ವೀಕರಿಸಿರುತ್ತಾರೆ.

31.ದಿನಾಂಕ 19-11-13 ರಂದು ವ್ಯವಸ್ಥಾಪಕರು ಭಾರತೀಯ ಜೀವವಿಮಾ ನಿಗಮ ಹಾಸನ ಇವರಿಗೆ ಆರೋಪಿತರಿಗೆ ಸೇರಿದ 8ಪಾಲಿಸಿಗೆ ಸಂಬಂಧಿಸಿದಂತೆ ಚಾಸಾ-54 ರವರು ನಿಪಿ-182 ರಂತೆ ಮಾಹಿತಿ ಕೋರಿ ಪತ್ರ ಬರೆದಿರುತ್ತಾರೆ. ಅದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಸದರಿಯವರು ನಿಪಿ-95 ರಂತೆ ದಿನಾಂಕ 23-11-13 ರ ಪತ್ರದೊಂದಿಗೆ ಸ್ವೀಕರಿಸಿರುತ್ತಾರೆ.

32.ದಿನಾಂಕ 19-11-13 ರಂದು ಆರೋಪಿತರ ಪತ್ನಿ ಪದ್ಮಾವತಿ ರವರ ಹೆಸರಿನಲ್ಲಿದ್ದ 2

ಎಲ್.ಐ.ಸಿ ಪಾಲಿಸಿ ಬಗ್ಗೆ ಮಾಹಿತಿ ಕೋರಿ ಎಲ್ ಐ ಸಿಯ ವ್ಯವಸ್ಥಾಪಕರಿಗೆ ಚಾಸಾ-54 ರವರು ನಿಪಿ-180ರಂತೆ ಪತ್ರ ಬರೆದಿರುತ್ತಾರೆ. ಅದಕ್ಕೆ ಸದರಿಯವರು ನಿಪಿ-93 ರಂತೆ ನೀಡಿದ ಮಾಹಿತಿಯನ್ನು ಚಾಸಾ-54 ರವರು ಸ್ವೀಕರಿಸಿರುತ್ತಾರೆ.

33. ದಿನಾಂಕ 19-11-13 ರಂದು ಆರೋಪಿತರ ಮಗ ಸುದರ್ಶನ್ ರವರ ಹೆಸರಿನಲ್ಲಿದ್ದ ಒಂದು ಎಲ್.ಐ.ಸಿ ಪಾಲಿಸಿ ಬಗ್ಗೆ ಮಾಹಿತಿ ಕೋರಿ ಎಲ್ ಐ ಸಿಯ ವ್ಯವಸ್ಥಾಪಕರಿಗೆ ಚಾಸಾ-54 ರವರು ನಿಪಿ-181ರಂತೆ ಪತ್ರ ಬರೆದಿರುತ್ತಾರೆ. ಅದಕ್ಕೆ ಸದರಿಯವರು ನಿಪಿ-94 ರಂತೆ ನೀಡಿದ ಮಾಹಿತಿಯನ್ನು ಚಾಸಾ-54 ರವರು ಸ್ವೀಕರಿಸಿರುತ್ತಾರೆ.

34. ದಿನಾಂಕ 19-11-13 ರಂದು ಆರೋಪಿತರ ಎಲ್ ಐ ಜಿ 214 ರ ಮನೆಯ ವಿದ್ಯುತ್ ಸ್ಥಾವರ ಸಂಖ್ಯೆ 3740ರ ಠೇವಣಿ ಹಾಗೂ ಬಿಲ್ ಗೆ ಸಂಬಂಧಿಸಿದಂತೆ ಮಾಹಿತಿ ಕೋರಿ **ನಿಪಿ-192** ರಂತೆ ಪತ್ರ ಬರೆದಿರುತ್ತಾರೆ.

<u>(ಮುಂದುವರದ ಮುಖ್ಯವಿಚಾರಣೆಯನ್ನು ಮುಂದೂಡಲಾಗಿದೆ)</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**